ಅನ್ನ, ಸಾರು, ತುಪ್ಪ, ಹಪ್ಪಳ, ಮಜ್ಜಿಗೆ. “ಏನು ಸ್ವಾಮಿ, ಇಷ್ಟು ಬೇಗ ಇವನ್ನೆಲ್ಲ ಸಿದ್ಧಪಡಿಸಿಬಿಟ್ಟಿರಿ'' ಎಂದೆ. “ತಡವಾಗಿಬಿಟ್ಟಿದೆ, ಇಲ್ಲವಾದರೆ ತಂಬುಳಿ, ಸಾಸ್ಮೆ ಮಾಡಬಹುದಾಗಿತ್ತು'' ಎಂದು ಪೇಚಾಡಿದರು. ''ಅದೆಲ್ಲ ಏನೂ ಅಗತ್ಯವಿಲ್ಲ, ಇದೇ ಬೇಕಾದಷ್ಟಾಯಿತು'' ಎಂದು ಸಮಾಧಾನ ಹೇಳಿದೆ. ನಿಜಕ್ಕೂ ಹಸಿದ ಹೊಟ್ಟೆಗೂ, ಅನ್ನಕ್ಕೂ ಒಂದು ಪುಟ್ಟ ಯುದ್ಧ ಎನ್ನುವಂತೆ ಇಬ್ಬರೂ ಉಂಡೆವು. 'ಇವರು ಯಾರೋ, ಅದು ಹೇಗೆ ಇವರೊಟ್ಟಿಗೆ ಈ ರಾತ್ರಿ ಇಲ್ಲಿ ಊಟಕ್ಕೆ ಬಂದು ಬಿಟ್ಟಿದ್ದೇನೋ' ಎಂದು ಅಚ್ಚರಿಪಡುತ್ತ ಊಟ ಮುಗಿಸಿದೆ.

ಶಾಸ್ತ್ರಿಗಳಿಗೆ ಇವೆಲ್ಲ ಸ್ವಾಭಾವಿಕ ಎನ್ನುವಂತೆ ಇತ್ತು. ಪಾತ್ರೆಗಳನ್ನೆಲ್ಲ ತೊಳೆದು ಒಳಕ್ಕಿಟ್ಟು ಹಾಲು, ಬಾಳೆಹಣ್ಣು ತಂದರು. ''ತಾಂಬೂಲ ರೂಢಿ ಉಂಟೇ?'' ಎಂದು 'ಕವಳದ ಕರಡಿಗೆ' ಮುಂದೂಡಿದರು. ಅಶ್ವತ್ಥ ಎಲೆಯಾಕೃತಿಯ ಆ ಕರಡಿಗೆ ಸುಂದರವಾಗಿ ಕಂಡಿತು. “ನನ್ನಪ್ಪನ ಕಾಲದಿಂದಲೂ ಇದೆ'' ಎಂದು ನಕ್ಕರು.

“ನೀವು ಹಾಡುವಂಥ ಕವಿತೆಗಳನ್ನು ಬರೆಯುತ್ತೀರೋ?'' ಎಂದರು. “ಇಲ್ಲ'' ಎಂದೆ. “ಹಾಡಲು ಬರುವಂತಿದ್ದರೆ ಮಾತ್ರ ಅದು ಕವಿತೆ ಎನ್ನುವ ಜಾತಿಯವನಲ್ಲ ನಾನು. ಆದರೆ, ಕವಿತೆ ಹಾಡಲು ಬಂದರೆ ಹೃದಯದಲ್ಲಿ ನೆಲೆಸುತ್ತದೆ'' ಎಂದರು. “ಹಾಡಲು ಬರದ ಕವಿತೆಗಳು ಹೃದಯದಲ್ಲಿ ನೆಲೆ ನಿಲ್ಲವು ಎಂದು ಹೇಳುತ್ತಿದ್ದೀರೋ?'' “ನನಗಂತೂ ಹಾಗನಿಸುತ್ತದೆ.''

ಅವರಿಗೆ ಸ್ವಾತಂತ್ರ್ಯ ಹೋರಾಟದ ದಿನಗಳು ನೆನಪಿಗೆ ಬಂದು ಮಾತಿನಲ್ಲಿ ಉತ್ಸಾಹ ಹೆಚ್ಚಿತು. ಪ್ರಭಾತ ಫೇರಿಯಲ್ಲಿ ಹಾಡುತ್ತಿದ್ದ ರಾಷ್ಟ್ರಾಭಿಮಾನದ ಹಾಡುಗಳು ಹೇಗೆ ಜನ ಸಮೂಹವನ್ನು ಒಟ್ಟಿಗೆ ತಂದವು ಎಂದೆಲ್ಲ ಹೇಳತೊಡಗಿದರು. ತಾನು ಗಾಂಧಿ ಆಶ್ರಮದಲ್ಲಿ, ವಿನೋಬಾ ಆಶ್ರಮದಲ್ಲಿ ಇದ್ದ ವರ್ಷಗಳ ಸುದ್ದಿ ಹೇಳತೊಡಗಿದಂತೆ ನನಗೂ ಇವರ ಬಗ್ಗೆ ಕುತೂಹಲ ಉಂಟಾಯಿತು. “ಓಹೋ, ನೀವು ಗಾಂಧೀಜಿಯೊಡನೆ ಇದ್ದಿರಿ'' ಎಂದು ಬೆರಗಿನಿಂದ ಕೇಳಿದೆ. ''ಇದ್ದೆ ಅಷ್ಟೇ ಅಲ್ಲ, ಅವರಿಂದಾಗಿ ನನ್ನಲ್ಲಿದ್ದ ಸಂಪ್ರದಾಯದ ಅನೇಕ ಮೂಢನಂಬಿಕೆಗಳನ್ನು ಕಳೆದುಕೊಂಡೆ'' ಎಂದರು. ಶಾಸ್ತ್ರಿಗಳು ಸಣ್ಣಾಸಾಮಾನ್ಯದವರಲ್ಲ ಅನ್ನಿಸಿತು. ಅವರ ಮಾತುಗಳಿಗೆ ಕಿವಿಗೊಟ್ಟು ಕೂತೆ.

“ನಮ್ಮದು ದೊಡ್ಡ ಕುಟುಂಬ. ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ಇಡೀ ಕುಟುಂಬ ಭಾಗವಹಿಸಿತ್ತು. ಬಂಧನಕ್ಕೊಳಗಾಗಿತ್ತು. ನಮ್ಮ ಜಮೀನು ಕೂಡ ಲಿಲಾವು ಆಯಿತು ಎಂದರೆ ಅದೆಷ್ಟು ಉಗ್ರ ಹೋರಾಟ ನಡೆಯಿತು ಯೋಚಿಸಿ.

ಮನೆಯಲ್ಲಿ ಹಿರಿಯರು ಬ್ರಿಟಿಷ್ ಸರಕಾರಕ್ಕೆ ಕರ ಕೊಡಲು ನಿರಾಕರಿಸಿದರು. ಅದರಿಂದಾಗಿ ಮನೆಯನ್ನೇ ಹರಾಜು ಹಾಕಿದರು. ಜೈಲಿನಿಂದ ಹೊರಬಂದಾಗ ವಾಸಮಾಡಲು ಮನೆ ಉಳಿದಿರಲಿಲ್ಲ. ಅಷ್ಟು ದೊಡ್ಡ ಜಮೀನುದಾರರಾಗಿದ್ದ ನಾವು ಒಮ್ಮೆಲೆ ಅನಾಥರಾಗಿಬಿಟ್ಟೆವು.

ನಗರದಲ್ಲಿ ನಮ್ಮ ದೊಡ್ಡಪ್ಪ ಹೋಟೆಲ್ ಆರಂಭಿಸಿದರು. ಸ್ವಾತಂತ್ರ್ಯವೀರರಿಗೆ ಅದೊಂದು ಕೇಂದ್ರವಾಗಿ ಬೆಳೆಯಿತು. ಮನೆಯ ಜನರೇ ಎಲ್ಲ ಕೆಲಸ ಮಾಡಿದರು. ಜೀವನೋಪಾಯಕ್ಕೆ ಆಹಾರ ಮಾರುವ ಸ್ಥಿತಿ ಬಂತು.

ಆದರೆ, ಅದನ್ನು ಬಿಟ್ಟು ಇನ್ನಾವ ಉಪಾಯವೂ ನಮಗೆ ಹೊಳೆಯಲಿಲ್ಲ. ಜೀವನದಲ್ಲಿ ಯಾವ ವೃತ್ತಿಯೂ ಕೀಳಾದುದಲ್ಲ ಎಂಬ ನಂಬಿಕೆಯಿಂದ ಹೊಸ ಜೀವನ ಆರಂಭವಾಯಿತು. ಹಾಗೆಂದು ಅದೇನೂ ತೀರಾ ಆರಾಮವಾಗಿ ನಡೆದುಕೊಂಡು ಹೋಯಿತೆಂದು ತಿಳಿಯಬೇಡಿ. ಅಡೆತಡೆಗಳೂ ಇದ್ದವು.

ಸ್ವಾತಂತ್ರ್ಯ ಸಂಗ್ರಾಮದ ಒಂದೆರಡು ಸಂದರ್ಭಗಳಲ್ಲಿ ಮನೆಯ ಹಿರಿಯರೆಲ್ಲರೂ ಒಟ್ಟಿಗೇ ಬಂಧನಕ್ಕೆ ಒಳಗಾದುದೂ ಇತ್ತು. ಆಗ ಹೋಟೆಲ್‌ಗೆ ಬೀಗವೇ ಗತಿ. ಅಂಥದೊಂದು ಸಂದರ್ಭದಲ್ಲಿ ನನ್ನ ಅಣ್ಣ ಮತ್ತು ನಾನು ಇಬ್ಬರೇ ಹೊರಗುಳಿದೆವು! ಅಣ್ಣನಾದರೂ ನನಗಿಂತ ಒಂದು ಒಂದೂವರೆ ವರ್ಷ ದೊಡ್ಡವನು. ಏನು ಮಾಡಬೇಕೆಂಬುದೇ ನಮಗೆ ಅರ್ಥವಾಗಲಿಲ್ಲ.

ನಮ್ಮೂರಿನ ಪಕ್ಕದ ಹಳ್ಳಿ ಮರದಳ್ಳಿ. ಅಲ್ಲಿಯ ಲಕ್ಷ್ಮಕ್ಕ ಬಹು ಹಿಂದಿನಿಂದಲೂ ವಿನೋಬಾ ಆಶ್ರಮಕ್ಕೆ ಹೋಗಿ ನೆಲೆಸಿದ್ದಳು. ದೂರದಿಂದ ಅವಳು ನಮಗೆ ಸಂಬಂಧದವಳೂ ಹೌದು. ಅವಳು ನಮ್ಮನ್ನು ವಿನೋಬಾ ಆಶ್ರಮಕ್ಕೆ ಕರೆದೊಯ್ಯುವೆನೆಂದಳು.